ಶ್ರೀ ಕಾಗೋಡು ತಿಮ್ಮಪ್ಪ —ಮಾನ್ಯ ಅಧ್ಯಕ್ಷರೇ, ನಾನು ಹೇಳುವುದ ಇಷ್ಟೇ ? ಆ ಸ್ಪೇಷನ್‌ನಲ್ಲಿ ಸಬ್ ಇನ್ಸ್‌ಪೆಕ್ಟರ್ ನಡೆದುಕೊಂಡು ರೀತಿ ನೀತಿ ಜೋತೆಗೆ ನೆಹಿಕರ್ ಒನರ ಮೇಲೆ ನಡೆಸಿದ ದೌರ್ಜನ್ಯಗಳನ್ನು ನೋಡಿದರೆ ಅತನಿಗೆ ಅಧಿಕಾರದ ಭ್ರಮೆಯಾಸ್ಪಿಯಾಗಿರುವಂತೆ ಕಾಣುತ್ತದೆ ?

ಶ್ರೀ ಡಿ. ದೇವರಾಜ ಅರಸ್.— ಕೆಲವು ಸಂದರ್ಭಗಳಲ್ಲಿ ಕೆಲವು ಅಧಿಕಾರಿಗಳು ಕೆಲವು ರೀತಿ ನಡೆದುಕೊಳ್ಳುತ್ತಾರೆ. ಅದನ್ನು ವಿಚಾರ ಮಾಡೋಣ. ಒಟ್ಟಿನಲ್ಲಿ ಕೇಸಿನ ಬಗ್ಗೆ ಅಸಿಸ್ಟೆಂಟ್ ಕಮಿಷನರ್ ವಿಚಾರಣೆ ನಡೆಸುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ —ನಮ್ಮ ಅಧಿಕಾರಿಗಳು ಈ ರೀತಿ ನಡೆದು ಕೊಳ್ಳುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ನಿಮ್ಮ ಅಧಿಕಾರಿಗಳು ಬೇರೆಯೇ ? ನಿಮ್ಮ ಅಧಿಕಾರಿಗಳು ಯಾರು ? ಇನ್ನು ಮೇಲೆ ನಾವು ನೋಡಬೇಕಾಗಿದೆ.

(*ii*) *re.*—Construction of a road after demolishing huts in Chamarjapet

ಶ್ರೀ ಕೆ. ಪ್ರಭಾಕರ ರೆಡ್ಡಿ (ಚಾಮರಾಜಪೇಟೆ).—ಅಧ್ಯಕ್ಷರೇ, ಚಾಮರಾಜಪೇಟೆ ಕ್ಷೇತ್ರಕ್ಕೆ ಸೇರಿರುವ ಭಾಗದಲ್ಲಿ ಸುಮಾರು 88 ಗುಡಿಸಲುವಾಸಿಗಳು ಸುಮಾರು 8-10 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅವರನ್ನು ಸ್ಲಮ್ ಕ್ಲಿಯರೆನ್ಸ್‌ಗೆ ಕೂಡ ಸೇರಿಸಿಲ್ಲ. ಬಿ. ಡಿ. ಎ. ಯವರು ಇದು ಸರ್ಕಾರದ ಹೋಣೆ ನಮಗೆ ಸೇರಿಲ್ಲವೆಂದು ರಸ್ತೆ ಒಡಯುವಾಗ ಈ ಗುಡಿಸಿಲುಗಳನ್ನು ಒಡೆಯ ಬೇಕೆಂದು ಹೊರಟಿದ್ದಾರೆ. ಆ ಗುಡಿಸಲು ವಾಸಿಗಳು ವಿಧಾನ ಸೌಧದ ಮುಂದೆ ಉಪವಾಸದ ಸತ್ಯಾಗ್ರಹ ಮಾಡುತ್ತಿದ್ದಾರೆ ನಾಲ್ಕು ದಿವಸಗಳಿಂದ. ಅವರ ಸ್ಥಿತಿ ಚಿಂತಾಜನಕವಾಗಿದೆ

ಶ್ರೀ ಡಿ. ದೇವರಾಜ ಅರಸ್.—ತಾವು ಒಂದು ಕೆಲಸಮಾಡಿ ನನ್ನ ಪರವಾಗಿ ತಾವು ಹೋಗಿ ಹೇಳಿ ಉಪವಾಸ ಮಾಡುವ ಅಗತ್ಯವಿಲ್ಲ. ನಾನು ಅದನ್ನು ವಿಚಾರಮಾಡಿ ನೋಡುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್ (ಮಲ್ಲೇಶ್ವರಂ).— ವಾಸ್ತವವಾಗಿ ಇದು ಪತ್ರವ್ಯವಹಾರದ ಪ್ರಕಾರ ಬಿ. ಡಿ. ಎ. ಯವರು ಭರವಸೆ ಕೊಟ್ಟಿದ್ದಾರೆ. ಆ ಮೇಲೆ ಪಕ್ಕದಲ್ಲಿ ಮನೆಗಳು ಬಂದಮೇಲೆ ಈಗ ಇವರನ್ನು ಬೇರೆ ಕಡೆಗೆ ಹೋಗಬೇಕೆಂದು ಹೇಳುತ್ತಿದ್ದಾರೆಂದು ಕೇಳಿದ್ದೇನೆ.

SRI D. DEVARAJ URS.—Whatever it is, I am prepared to invite them to tell me that all they know about it. I am sure they will agree that I must be given time to look into these things.

ಶ್ರೀ ಕೋಣಂದೂರು ಲಿಂಗಪ್ಪ.—ಈ ಬಗ್ಗೆ ನಮ್ಮ ಕಳವಳ ಏನೆಂದರೆ ಇದು ತುರ್ಕಮನ ಗೇಟ್ ಆಗಬಾರದು.

ಶ್ರೀ ಡಿ. ದೇವರಾಜ ಅರಸ್.—ನೀವು ತುರ್ಕಮನ್ ಗೇಟ್ ನೋಡಬೇಕಾದರೆ ದೆಲ್ಲಿಗೆ ಹೋಗಬೇಕು. I will find out what it is. I cannot say what it is now.

ಶ್ರೀ ಕೆ. ಪ್ರಭಾಕರ ರೆಡ್ಡಿ.—ಅಲ್ಲಿ ಮನೆಗಳನ್ನು ಕೆಡುವುತ್ತಿರುವುದನ್ನು, ರಸ್ತೆಗಳನ್ನು ಒಡೆಯುತ್ತಿರುವುದನ್ನು ನಿಲ್ಲಿಸುತ್ತೇವೆ ಎಂಬ ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಕಾರಣಗಳನ್ನು ಕೇಳುತ್ತೇನೆ ಎಂದು ಹೇಳುತ್ತಿದ್ದಾರಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದೇ ಸಂದರ್ಭದಲ್ಲಿ ಇನ್ನೊಬ್ಬರು ಭೀಮ ಕುಮಾರ್ ಎಂಬ ರಾಷ್ಟ್ರಪ್ರೇಮಿಗಳು ಇದ್ದಾರೆ. ಅವರ ಹತ್ತಿರ ಜಾಫರ್‌ಷರೀಫ್ ಅವರು ಮಾತನಾಡಿ ಉಪವಾಸ ಸತ್ಯಾಗ್ರಹದಿಂದ ಅವರನ್ನು ಎಬ್ಬಿಸಿದ್ದಾರೆ. ಅವರು 3-4 ದಿವಸಗಳಿಂದ ಗುಡಿಸಲುಗಳನ್ನು ಕಿತ್ತು ಹಾಕಿದ್ದಾರೆಂದು ಉಪವಾಸ ಸತ್ಯಾಗ್ರಹ ಕುಳಿತಿದ್ದರು. ಇದನ್ನೂ ಸಹ ತಮ್ಮ ಗಮನಕ್ಕೆ ತೆಗೆದು ಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಈ ಗುಡಿಸಲುಗಳನ್ನು ಕಿತ್ತುಹಾಕಿರುವ ಬಗ್ಗೆ ಪ್ರತಿವರ್ಷವೂ ಅಲ್ಲಿ ಏಳುತ್ತಿರುವ ಗುಡಿಸಲುಗಳು ತಾತ್ಕಾಲಿಕವಾಗಿ ಇದೆಯೇ ಖಾಯಂ ಆಗಿ ಇದೆಯೇ ಅಥವಾ 20 ವರ್ಷಗಳಿಂದ ಇದೆಯೇ ಎಂಬುದು ಯಾರಿಗೆ ಗೊತ್ತು. That is why allow me to look into it · ಅಲ್ಲಿ ಗುಡಿಸಲುಗಳು 1971ನೇ ಇಸವಿಯಿಂದ ಇವೆ ಎಂದು ಕೆಲವರು ಹೇಳುತ್ತಿದ್ದಾರೆ. ಅವರು ಜಂಡ ಹಿಡಿದುಕೊಂಡು ಹೊರಟರೆ ನಿಮಗೆ ಎಷ್ಟು ಗುಡಿಸಲುಗಳು ಬೇಕು ? ಅವರು ಅಲ್ಲಲ್ಲೇ ಗುಡಿಸಲುಗಳನ್ನು ಹಾಕುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲೆಲ್ಲಿ ಖಾಲಿ ಜಾಗಗಳು ಇವೆ ಅಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ ಆ ಪ್ರಕಾರ ನಾವು ಗುಡಿಸಲುಗಳನ್ನು ಹಾಕಿಕೊಂಡಿದ್ದೇವೆಂದು ಅವರು ಹೇಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಓಟಿಂಗ್ ಟೈಮ್‌ನಲ್ಲಿ ಎಲ್ಲರೂ ಹೇಳುತ್ತಾರೆ. ನೀವು ಎಷ್ಟೋ ಸಲ ಹೇಳಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಆ ರೀತಿ ಹೇಳಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳಿದ್ದೀರಿ.

ಶ್ರೀ ಎಂ ಎಸ್. ಕೃಷ್ಣನ್—ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದಾಗ ಆ ರೀತಿಯ ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆ ಈಡೇರಲಿಲ್ಲ. ಈಗ ಬಹಳ ತೊಂದರೆಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಈ ಸ್ಲಮ್ ಕ್ಲಿಯರೆನ್ಸ್‌ಗಾಗಿ I remember I had asked the Corporation as well as the Slum Clearance Board. ಒಂದು ವರ್ಷದಲ್ಲಿ ಇಷ್ಟೊಂದು ಸ್ಲಮ್ಸ್ ಬರುವುದಾದರೆ ಈ ಬೆಂಗಳೂರು ಅದಕ್ಕೆ ಸಾಗುವುದಿಲ್ಲ. ಎಂದು ನಾನು ಅವರಿಗೆ ಹೇಳಿದ್ದೇನೆ. ಇಲ್ಲಿ ಏನಾಗುತ್ತದೆ ಎಂದರೆ ದಕ್ಷಿಣ ಭಾಗದ ರೈಲುಗಳು ಬೆಂಗಳೂರಿಗೆ ಬಂದಹಾಗೆಲ್ಲಾ ಸ್ಲಮ್ಸ್ ಏರಿಯಾ ಬೆಳೆಯುತ್ತಾ ಇದೆ. ಒಂದು ಸ್ಪೇಜ್‌ನಲ್ಲಿ ಇರತಕ್ಕಂಥ ಸ್ಲಮ್ಸ್ ಅನ್ನು ರಿಹಾಬಿಲಿಟೇಟ್ ಮಾಡಬಹುದು. ಒಂದು ಜಾಗದಲ್ಲಿ ರಿಹಾಬಿಲಿಟೇಟ್ ಮಾಡಿದರೆ ಇನ್ನೊಂದು ಜಾಗದಲ್ಲಿ 50 ಗುಡಿಸಲುಗಳನ್ನು ಹಾಕಿ, ಅಲ್ಲೊಂದು ಜಂಡ, ಅಲ್ಲೊಬ್ಬ ಮುಖಂಡ ಈ ರೀತಿ ಆಗುತ್ತಾ ಇದೆ. ನಾವು ತಾನೇ ಎಷ್ಟು ಅಂತ ಮಾಡುವುದಕ್ಕಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಆ ವಿಷಯದಲ್ಲಿ ನಾವು ತಮಗೆ ಹೇಳುವುದಿಲ್ಲ.

SRI D. DEVARAJ URS —That is why when I am saying you will agree that Government cannot go on making wild promises ; I wan to know whether these people are within the Jurisdiction of a stage at which we have taken up enumeration and so many other thin s. Certainly I don't want to simply throw them out high and but I am anxious to see that they are given some place where they can comfortably live Let me go into it. I will certainly find out whether BDA is acting arbitrarily or there may be so me other background. ಕೆಲವು ವೇಳೆ ಏನಾಗುತ್ತದೆ ಎಂದರೆ ಅಲ್ಲೇ ಜಾಗ ಕೊಡಬೇಕು ಎಂದು ಕುಳಿತುಕೊಳ್ಳುತ್ತಾರೆ ಇದಕ್ಕೆ ಕಾರಣಗಳು ಬೇಕಾದಷ್ಟು ಇವೆ. ಆದರೂ they cannot persist. ಬೇರೆಯವರಿಗೆ ಆ ಜಾಗವನ್ನು ಹಂಚಿಕೊಡುವುದಕ್ಕೆ ಹೋಗಿದ್ದರೆ ಆ ಮಾತು ಬೇರೆ. There are places and pockets where you cannot allow the slums to be located there only You have to shift it to some other place ಈ ಜಿನ್ಯೆನ್ ಸ್ಲಮ್ ಡ್ವೆಲ್ಲರ್ಸ್ ಬಗ್ಗೆ, One assurance I can give is, I will not allow them to be thrown out and leave them to their fate. I will see that they are also provided sites for their living. This much I can say.

ಶ್ರೀ ಕೊಣಂದೂರು ಲಿಂಗಪ್ಪ.—ನಾನು ನಿನ್ನೆ ರೂಲ್ 312ರ ಪ್ರಕಾರ ಚಕ್ಕ, ನವೇಹಕ್ಕು ಮತ್ತು ವರಾಹಿ ಪ್ರಾಜಿಕ್ಟ್‌ಗಳಲ್ಲಿ ಅನೇಕ ಊರುಗಳು ಮುಳುಗಡೆಯಾಗಿ ಜನರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ಒಂದು ನೋಟೀಸನ್ನು ಕಳುಹಿಸಿದ್ದೇನೆ

ಅಧ್ಯಕ್ಷರು. ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಈಗ ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣಪ್ಪನವರು ಮಾತನಾಡಬೇಕು.

Budget Estimates for 1977-78

General Discussion (Debate not concluded)

†ಶ್ರೀ ಎಂ. ಎಸ್. ಕೃಷ್ಣಪ್ಪ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆದಿವಸ ನಾನು ಮಾತನಾಡುತ್ತಾ ಈ ಚುನಾವಣಾ ವಿಷಯದಲ್ಲಿ ಮಾನ್ಯ ಅರ್ಥಸಚಿವರು ಏನು ಹೇಳಿದ್ದಾರೆ, ಆ ಬಗ್ಗೆ ವಿಶ್ಲೇಷಣೆ ಮಾಡಿದ್ದೇನೆ. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಸಾಕಷ್ಟು ವೇಳೆ ಇಲ್ಲವೆಂದು ಹೇಳಬೇಕಾಗಿದೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ ಈ ಚುನಾವಣಾ ಫಲಿತಾಂಶದಿಂದ ಎಲ್ಲರೂ ಸರಿಯಾದ ಪಾಠವನ್ನು ಕಲಿಯಬೇಕಾಗಿದೆ. ಆದ್ದರಿಂದ ಪಾಠವನ್ನು ಕಲಿಯದೆ ಉದ್ಧಟತನದಿಂದ ಇದ್ದರೆ ಮತ್ತೆ ಎಲ್ಲರೂ ತೊಂದರೆಗೆ ಒಳಗಾಗುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಈಗ ನಮ್ಮ ಅರ್ಥಸಚಿವರು ಮಂಡಿಸಿರತಕ್ಕಂಥ ಬಡ್ಜೆಟ್, ಇದೊಂದು ಡಿಪ್ಯಿಸಿಟ್ ಬಡ್ಜೆಟ್ ಆಗಿದೆ. ನುಮಾರು 32-15 ಕೋಟಿ ರೂಪಾಯಿಗಳಿಗೆ ಇದು ರೆಡ್ಯೂಸ್ ಆಗಿರುವುದರಿಂದ ಇದು 3 -15 ಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ ಆಗಿದೆ. ಇದು ಇಷ್ಟು ಖೋತಾ ಬಡ್ಜೆಟ್ ಆಗಿರಬೇಕಾದರೆ ಇದನ್ನು ಹೇಗೆ ಭರ್ತಿ ಮಾಡುವುದು ಎಂಬುದು ಪ್ರಮುಖವಾದ ಪ್ರಶ್ನೆಯಾಗಿದೆ. ಅವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆ ಎಂದರೆ "I am not proposing any specific measures at this stage to cover this deficit. We hope that through normal buoyancy in receipts and improved collections, both of which, of course are dependent on a good monsoon, bulk of this deficit could be covered. We also propose to observe non-Plan economies and take such other measures, as may be necessary, so that the maximum resources become available for development programmes." ಎಂದು ಹೇಳಿದ್ದಾರೆ. ಅವರು ಈ ರೀತಿ ಹೇಳಿರುವುದರಲ್ಲಿ ಯಾರಿಗಾದರೂ ಖಂಡಿತವಾಗಿಯೂ ಅದರ ಮೇಲೆ ಭರವಸೆ ಬರುವುದಕ್ಕೆ ಸಾಧ್ಯವಿಲ್ಲ ನಾವು ಸರಿಯಾದ ರೀತಿಯಲ್ಲಿ ಕಲೆಕ್ಷನ್ ಮಾಡುತ್ತೇವೆ, ಅದನ್ನು ಕಲೆಕ್ಟ್ ಮಾಡಬೇಕಾದರೂ ಸಹ ಸಾಕಷ್ಟು ಮಳೆ ಬಂದರೆ ಮಾತ್ರ ಆಗುತ್ತದೆ ಎನ್ನುವ ತರಹದಲ್ಲಿ ಹೇಳಿದ್ದಾರೆ. ಈ ಡ್ಯೆವನಿಯಮಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳಿಗೆ ಇದನ್ನು ಅನ್ವಯಿಸಿಕೊಂಡರೆ ಸಾಧ್ಯವಿಲ್ಲ ಅದರ ಬದಲು ಬೇರೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ ಇನ್ನಷ್ಟು ತೆರಿಗೆಯನ್ನು ಜನರ ಮೇಲೆ ಹೊರ್ಲಿಸಬೇಕಾಗುತ್ತದೆ. ಈಗಾಗಲೇ ಸ್ವಲ್ಪಮಟ್ಟಿಗೆ ತೆರಿಗೆಯನ್ನು ಹೊರಿಸಿದ್ದಾರೆ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು ಜನಸಾಮಾನ್ಯರ ಮೇಲೆ ಹಾಕಿರುವುದು ಸರಿಯಾದುದಲ್ಲ ಎಂದು ಹೇಳಬೇಕಾಗಿದೆ. ಆದ್ದರಿಂದ ಮಾನ್ಯ ಅರ್ಥಸಚಿವರು ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯ ಈ 32.15 ಕೋಟಿ ರೂಪಾಯಿಗಳು ಖೋತಾ ಆಗಿರತಕ್ಕಂಥಾದ್ದನ್ನು ಯಾವ ಒಂದು ತೆರಿಗೆಯನ್ನು ಹಾಕದೆ ಭರ್ತಿ ಮಾಡಬೇಕಾದರೆ ಬೇರೆ ವಿಧಿ ಇಲ್ಲದೇ ಕೇಂದ್ರದಿಂದ ಸಹಾಯವನ್ನು ಪಡೆಯಬೇಕಾಗಿದೆ. ಕೇಂದ್ರದಲ್ಲಿ ಜನತಾ ಸರ್ಕಾರವಿದೆ, ಇಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ಕೇಂದ್ರದಿಂದ ಸಹಾಯವನ್ನು ಪಡೆಯುವಂತ ಜವಾಬ್ದಾರಿ ನಮ್ಮ ಸರ್ಕಾರಕ್ಕಿದೆ. ಹಾಗೆಯೇ ಅವರಿಗೂ ಹಣ ಕೊಡುವ ಜವಾಬ್ದಾರಿ ಇದೆ. ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದವರು 6 ಆರ್ಥಿಕ ಆಯೋಗಗಳನ್ನು ರಚನೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸಹ ಅದನ್ನು ಅನುಸರಿಸಿದ್ದಾರೆ. ಈಗ 7ನೇ ಆರ್ಥಿಕ ಆಯೋಗವನ್ನು ರಚನೆ ಮಾಡಿ ಇದರ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ತೆಗೆದ ಕೊಳ್ಳಬೇಕಾಗುತ್ತದೆ. ಏಕೆಂದರೆ ಹಿಂದಿನ ಆರು ಆಯೋಗಗಳಲ್ಲಿ ನಡೆದಿರುವಂತ ವಿದ್ಯಮಾನಗಳನ್ನು ನೋಡುವುದಾದರೆ ಬಡ್ಜೆಟ್ ಮೆಮೊರಾಂಡಮ್ಮು ನಲ್ಲಿ ಆ ಬಗ್ಗೆ ಧೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಅದರ ಬಗ್ಗೆ ಎರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.